ಶ್ರೀ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ನಾಲ್ಕು

ಆ) ವೈದ್ಯರ ಅಭಾವದಿಂದ ಭರ್ತಿ ಮಾಡಲಾಗಲಿಲ್ಲ.

ಇ) ಅದಷ್ಟು ಬೇಗನೆ ತುಂಬಲಾಗುತ್ತದೆ.

ಮಂಸಾಶನ ಪಡೆಯುವ ಕಲಾವಿದರು

೬೪೯ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಾರ್ತಾ ಯುವಜನ ಸೇವಾ ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೪, ೮೪-೮೫ ರ ಡಿಸೆಂಬರ್‌ವರೆಗೆ ರೂ ೫೦೦-೦೦ ವಂತ್ತು ೨೫೦-೦೦ ಗಳ ಮಾಸಾಶನ ಪಡೆಯುತ್ತಿರುವ ಕ್ರೀಡಾಪಟುಗಳು ಸಾಹಿತ್ಯ ಯಕ್ಷಗಾನ ಇನ್ನಿತರ ಕಲಾವಿದರುಗಳ ಸಂಖ್ಯೆ ಎಷ್ಟು ? ಪ್ರತ್ಯೇಕವಾಗಿ ವಿವರಗಳು ನೀಡುವುದು.

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ, ಕ್ರೀಡಾ ರಾಜ್ಯ ಸಚಿವರು).—

ಕ್ರೀಡಾಪಟುಗಳಿಗೆ.—

ಇ) ೧೯೮೫-೮೬ ರಲ್ಲಿ ಯಾವ ಕ್ರೀಡಾಪಟುಗಳಿಗೂ ಮಾಸಾಶನ ಕೊಟ್ಟಿಲ್ಲ.
೨೦ ೧೯೮೪-೮೫ ರಲ್ಲಿ ಮಾಸಾಶನ ಪಡೆದವರ ಸಂಖ್ಯೆ ೬೨

ವಿವರಗಳು.—

ಅ) ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿದ ೪ ಮಂದಿಗೆ ಮಾಹೆಯಾನ ರೂ ೩೦೦-೦೦

ಆ) ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ೧೩ ಮಂದಿಗೆ ಮಾಹೆಯಾನ ರೂ ೨೦೦-೦೦, ಹಾಗೂ

ಇ) ರಾಜ್ಯಮಟ್ಟದಲ್ಲಿ ಭಾಗವಹಿಸಿದ ೪೫ ಮಂದಿಗೆ ಮಾಹೆಯಾನ ರೂ ೧೫೦-೦೦ ರಂತೆ ಮಾಸಾಶನ ಮಂಜೂರು ಮಾಡಿದೆ.

೧೯೮೫-೮೬, ೮೬-೮೭ ರಲ್ಲಿ ಗೌರವಧನ ಪಡೆಯುತ್ತಿರುವ ಸಾಹಿತಿ, ಕಲಾವಿದರುಗಳ ಸಂಖ್ಯೆ

೧೯೮೫-೮೬		೧೯೮೬-೮೭	
ರೂ ೫೦೦-೦೦	ರೂ ೨೫೦-೦೦	ರೂ ೫೦೦-೦೦	ರೂ. ೨೫೦-೦೦
೪೦	೧೪೯	೩೩	೨೫೯

ಕ್ಷೇತ್ರವಾರು ವಿವರ ಲಗತ್ತಿಸಿದೆ.